# ಮೂರನೆಯ ಕಣ್ಣು

ಸಾಮಾನ್ಯರ ಪಾಲಿಗೆ ಭಗವಂತ ಕೊಟ್ಟಿರುವುದು ಎರಡು ಕಣ್ಣುಗಳನ್ನು ಮಾತ್ರ. ಆದರೆ ಕೆಲವು ಮಂದಿ ಅದೃಷ್ಟವಂತರಿಗೆ ಮೂರನೆಯ ಕಣ್ಣೊಂದು ಇರುತ್ತದೆ. ಅದರ ಸಹಾಯದಿಂದ ಸಾಮಾನ್ಯರಿಗೆ ಕಾಣದಿರುವ ವಸ್ತು, ಸಂಗತಿಗಳನ್ನು ಕಾಣಲು, ಅನುಭವಿಸಲು ಅವರಿಗೆ ಸಾಧ್ಯವಾಗುತ್ತದೆ. ದಿನನಿತ್ಯವೂ ಎದುರಾಗುತ್ತಿರುವ ಪರಿಚಿತ ದೃಶ್ಯಗಳಲ್ಲಿ, ಘಟನೆಗಳಲ್ಲಿ ಅಸಾಧಾರಣವಾದುದೇನನ್ನೋ ಅವರು ಕಾಣುತ್ತಾರೆ. ಅಂಥವರಿಗೆ ಹಸುಗೂಸಿನ ಕಣ್ಣಿನ ಬೆಳಕು 'ಶಿವನ ಕೈ ಅಲಗು ಹೊಳೆದಂತೆ' ಕಾಣುತ್ತದೆ; ಆಕಾಶದಲ್ಲಿ ಹಾರುವ ಬೆಳ್ಳಕ್ಕಿಗಳ ಸಾಲಿನ ವಿನ್ಯಾಸ 'ದೇವರ ರುಜು' ಎನ್ನಿಸುತ್ತದೆ; ಬಿಳಿಮುಗಿಲು ಬಾನಿನ ಜಗುಲಿಯಲ್ಲಿ ಆಡುತ್ತಿರುವ ಮಗುವಿನಂತೆ ತೋರುತ್ತದೆ; ಹಕ್ಕಿಗಳ ಹಾಡು 'ಗಿಡಗಂಟೆಗಳ ಕೊರಳಗಾನ' ಎಂದು ಭಾಸವಾಗುತ್ತದೆ; ಹಾರುತ್ತಿರುವ ಗರುಡನ ನೆರಳು ಗಾಂಧೀಜೀಯ ಪ್ರತೀಕವೆನ್ನಿಸುತ್ತದೆ; ಗಾಳಿಯಲ್ಲಿ ತೇಲಿಬರುವ ಹಕ್ಕಿಯ ಗರಿಯೊಂದರ ಸ್ಪರ್ಶ ರಾಮಾಯಣವನ್ನೇ ಬಗೆಗಣ್ಣಿನೆದುರು ತೆರೆದಿಡುತ್ತದೆ. ಹೀಗೆ ರೂಢಿಗತವಾಗಿರುವ ಸಂಗತಿಗಳಲ್ಲಿ ಅನೂಹ್ಯವಾದ ಹೊಸತನವನ್ನು ಕಂಡು, ಅನುಭವಿಸಲು ಸಹಾಯ ಮಾಡುವ ಮೂರನೆಯ ಕಣ್ಣನ್ನು 'ಪ್ರತಿಭಾ ಚಕ್ಷು' ಎನ್ನುತ್ತೇವೆ.



'ಪ್ರತಿಭಾ' ಎನ್ನುವ ಸಂಸ್ಕೃತಪದದ ಅರ್ಥ 'ಹೊಳೆಯುವಿಕೆ' ಎಂದು ನಿತ್ಯ ಪರಿಚಯದಿಂದಾಗಿ ವಿಸ್ಮಯ, ಕುತೂಹಲಗಳ ಹೊಳಪನ್ನು ಕಳೆದುಕೊಂಡಿರುವ ವಸ್ತು-ಸಂಗತಿಗಳಲ್ಲಿ ಪ್ರತಿಭಾವಂತರಿಗೆ ಯಾವುದೋ ವಿಶಿಷ್ಟತೆ, ಹೊಸತನ ಗೋಚರಿಸುತ್ತದೆ; ಅತ್ಯಂತ ಸಹಜವೆನ್ನಿಸುವ ಘಟನೆಗಳಲ್ಲಿ ಹೊಸತೊಂದು ಅರ್ಥ 'ಹೊಳೆಯುತ್ತದೆ'. ಪ್ರತಿಭೆಯ ಬೆಂಗಾವಲಿದ್ದಾಗ 'ಭೃಂಗದ ಬೆನ್ನೇರಿ ಕಲ್ಪನಾ ವಿಲಾಸ' ಚಿಮ್ಮಿ ಬರಲು ಸಾಧ್ಯವಾಗುತ್ತದೆ. ಆದ್ದರಿಂದಲೇ ಪ್ರತಿಭೆಯನ್ನು ಭಾರತೀಯ ಕಾವ್ಯಮೀಮಾಂಸೆಯಲ್ಲಿ 'ನವ ನವೋನ್ಮೇಷ ಶಾಲಿನೀ' ಎಂದು ವರ್ಣಿಸಿರುವುದು. 'ಉನ್ಮೇಷ' ಎಂದರೆ ಹೊಳೆಯುವಿಕೆ ಅಥವಾ ಅರಳುವಿಕೆ, ಜಡ ವಾಸ್ತವಗಳಲ್ಲಿ ಹೊಸತನ, ಪುನರ್ನವತೆಗಳು ಅರಳಿಕೊಳ್ಳುವಂತೆ ಪ್ರಚೋದಿಸುವ ಶಕ್ತಿಯೇ ಪ್ರತಿಭೆ. ಪ್ರತಿಭೆಯೆಂಬ ಈ ಮೂರನೆಯ ಕಣ್ಣು ಕವಿ, ಕಲಾವಿದ, ವಿಜ್ಞಾನಿ- ಎಲ್ಲರಿಗೂ ಅತ್ಯಂತ ಅಗತ್ಯವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರತಿಭೆಯ ದಿವ್ಯಸ್ಪರ್ಶದಿಂದ ಮೇಲ್ನೋಟಕ್ಕೆ ಕ್ಷುಲ್ಲಕವೆನ್ನಿಸುವ ವಸ್ತುಗಳೂ ಹೊಸ ವೈಭವದಿಂದ ಬೆಳಗುತ್ತದೆ. 'ಟು ಮಿ ದ ಮೀನೆಸ್ಟ್ ಫ್ಲವರ್ ದಟ್ ಬ್ಲೋಸ್ ಕೆನ್ ಗಿವ್ ಥಾಟ್ಸ್, ದಟ್ ಡು ಆಫನ್ ಲೈ ಟೂ ಡೀಪ್ ಫಾರ್ ಟಿಯರ್ಸ್'- ಎಂಬ ವರ್ಡ್ಸ್‌ವರ್ತ್ ಕವಿಯ ಉದ್ಗಾರ ಇದನ್ನೇ ಹೇಳುತ್ತದೆ.

ಪ್ರತಿಭೆಗೆ 'ಅಪೂರ್ವ ವಸ್ತು ನಿರ್ಮಾಣ ಸಾಮರ್ಥ್ಯವಿದೆ' ಎನ್ನುತ್ತಾನೆ ಮಹಾದಾರ್ಶನಿಕ ಅಭಿನವಗುಪ್ತ. ಲೌಕಿಕದ ಒಡಲಲ್ಲಿ ಮರೆಯಾಗಿರುವ 'ಅಲೌಕಿಕತೆ'ಯನ್ನೂ, ವ್ಯಾವಹಾರಿಕೆಯಲ್ಲಿ ಹುದುಗಿರುವ ಪಾರಮಾರ್ಥಿಕತೆಯನ್ನೂ ಕಾಣಬೇಕಾದರೆ ಪ್ರತಿಭೆಯ ಸಹಕಾರ ಬೇಕು. ತಾತ್ತ್ವಿಕ ಭಾಷೆಯಲ್ಲಿ ಹೇಳುವುದಾದರೆ ಪ್ರತಿಭೆಯಿಂದಾಗಿ ಮನುಷ್ಯನಿಗೆ ಒಂದು 'ದಿವ್ಯದೃಷ್ಟಿ' ಪ್ರಾಪ್ತವಾಗುತ್ತದೆ ಇದನ್ನು 'ಪ್ರತಿಭಾನ' (ಇನ್‌ಟ್ಯುಷನ್) ಅಥವಾ 'ಅಂತರ್‌ದೃಷ್ಟಿ' ಎಂದೂ ಗುರುತಿಸುತ್ತಾರೆ. ಶ್ರೀಕೃಷ್ಣ ತನ್ನ ವಿಶ್ವರೂಪವನ್ನು ತೋರಿಸುವಾಗ ಅರ್ಜುನನಿಗೆ ಕರುಣಿಸಿದ್ದು ಅಂಥದೇ ದಿವ್ಯದೃಷ್ಟಿ. ಅದರಿಂದಾಗಿ ಅರ್ಜುನನಿಗೆ ತನ್ನ ಬಂಧುವೂ ಸಖನೂ ಆಗಿ ಪರಿಚಿತನಾಗಿದ್ದ ಶ್ರೀಕೃಷ್ಣನಲ್ಲಿ ಬೃಂಹಿತಗೊಂಡ ವಿರಾಟ್ ಪುರುಷನನ್ನು ಕಾಣಲು ಸಾಧ್ಯವಾಯಿತು. ಪ್ರತಿಭೆಯೆಂಬುದು ಯೌಗಿಕ ಸ್ಥಿತಿಯನ್ನು ಆಹ್ವಾನಿಸಿಕೊಳ್ಳುವ ಸಂದರ್ಭವಿದು. ವಸ್ತುಗಳ ಅಂತರಾಳದಲ್ಲಿರುವ ಆಧ್ಯಾತ್ಮಿಕ ಸೌಂದರ್ಯವನ್ನು ಕಾಣಬೇಕಾದರೆ ಇಂಥ ದಿವ್ಯದೃಷ್ಟಿ ಒದಗಿ ಬರಬೇಕು, ಅದಕ್ಕಾಗಿಯೇ ಉಪನಿಷತ್ತಿನ ಋಷಿ- ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ। ತತ್ ತ್ವಂ ಪೂಷನ್ ಅಪಾವೃಣು ಸತ್ಯ ಧರ್ಮಾಯ ದೃಷ್ಟಯೇ॥ (ಸತ್ಯದ ಮುಖವು ಚಿನ್ನದ ಮುಚ್ಚಳದಿಂದ ಮುಚ್ಚಲ್ಪಟ್ಟಿದೆ; ಓ ಸೂರ್ಯನೇ, ಅದನ್ನು ಸರಿಸು; ನಾನು ನಿನ್ನ ನಿಜರೂಪವನ್ನು ಕಾಣುವಂತಾಗಲಿ)- ಎಂದು ಪ್ರಾರ್ಥಿಸಿರುವುದು.

■ ವೈನತೇಯ

# ಮಾತೇ ಮುತ್ತು

★ ಶಿಕ್ಷೆಗೆ ಕಾಲು ಕುಂಟು; ಆದರೆ ನಿಧಾನವಾಗಿ ಬಂದೇ ಬರುತ್ತದೆ.

-ಸ್ಪೇನ್ ಗಾದೆ

★ 'ನನಗೆ ಸಾಕಷ್ಟಿದೆ' ಎಂದು ಯಾರು ತಿಳಿಯಬಲ್ಲರೋ ಅವರು ಶ್ರೀಮಂತರು.

-ಲೋಟ್ಜು

★ ನಿನಗೆ 'ಶಾಂತಿ' ಯಾವುದರಿಂದಲೂ ದೊರೆಯದು; ಅದನ್ನು ನೀನೇ ತಂದುಕೊಳ್ಳಬೇಕು.

-ಎಮರ್‌ಸನ್

★ ಯಾವುದೇ ಆದರ್ಶ ಶಾಶ್ವತವಾಗಿ ಇರಲು ಸಾಧ್ಯವಿಲ್ಲ. ನಮ್ಮ ಆದರ್ಶದ ಮೌಲ್ಯಗಳ ಪುನರ್ ಮೌಲ್ಯೀಕರಣಕ್ಕೆ ಯಾವತ್ತೂ ಅವಕಾಶ ಇರಬೇಕು.

-ಬಿ.ಆರ್.ಅಂಬೇಡ್ಕರ್

★ ಹೆಚ್ಚು ಪ್ರೇಕ್ಷಕರಿಗೆ ತಲುಪುವುದೇ ಶ್ರೇಷ್ಠ ನಾಟಕ, ಅದೇ ಕಲಾತ್ಮಕ.

-ಪಿ.ಬಿ.ಧುತ್ತರಗಿ

★ ಸತ್ಯ ಕೂಡ ಆಯಾಯ ಕಾಲಮಾನದ ತುಲನೆಯಿಂದ ಬದಲಾಗುವ ಜೀವನ ನಿರ್ಣಯ.

-ಶಿವರಾಮ ಕಾರಂತ

★ ಅತ್ಯಂತ ಅನ್ಯಾಯದಿಂದ ಕೂಡಿದ ಶಾಂತಿ, ಅತ್ಯಂತ ನ್ಯಾಯಯುತವಾದ ಯುದ್ಧಕ್ಕಿಂತ ಮೇಲು.

-ಸಿಸಿರೋ

★ ಸತ್ಯ ಎಂದೂ ಸಾಯದೆನ್ನುವರು. ಆದರೆ ಸತ್ಯ ನುಡಿದರೆ ಉಳಿಗಾಲವೇ ಇಲ್ಲವಲ್ಲ!

-ಮಿರ್ಜಿ ಅಣ್ಣಾರಾಯ

★ ಪವಿತ್ರ ಭಾರತದಲ್ಲಿ ಗುಡಿಗಳು, ಚರ್ಚ್‌ಗಳು, ಮಸೀದಿಗಳು... ಎಲ್ಲವೂ ಇವೆ. ಆದರೆ ನಾನು ಹುಡುಕುತ್ತಿದ್ದೇನೆ ದೇವರನ್ನು... ದಯಮಾಡಿ ಹೇಳಿ ದೇವರು ಎಲ್ಲಿದ್ದಾನೆ?

-ಜಿ.ಎಸ್.ಶಿವರುದ್ರಪ್ಪ

★ ಸತ್ಯ ವಾಕ್ಯಕ್ಕೆ ಹಿತವೆಂಬುದು ಸಂಯಮದ ಕಡಿವಾಣ.

-ರಂ.ಶ್ರೀ.ಮುಗಳಿ

★ ಸನ್ಯಾಸಿ ಬಿಡಬೇಕಾದದ್ದು ಸ್ವಾರ್ಥ; ಕಟ್ಟಿಕೊಳ್ಳಬೇಕಾದದ್ದು ಮಾನವ ಸಂಸಾರ.

-ಎ.ಎನ್.ಮೂರ್ತಿರಾವ್

★ ನಾಡಿಗೆ ದೊರೆತಿಹ ಸ್ವಾತಂತ್ರ್ಯದ ಸವಿ ಹತ್ತಿದೆ ಕೆಲವರಿಗೆ, ಎಡಗೈ ಬಲಗೈ ಬೆಚ್ಚಗೆ ಇಡದಿರೆ ಕೊಡುವರು ಕಸಬರಿಗೆ.

-ಚೆನ್ನವೀರ ಕಣವಿ

★ ಅಕ್ಷರಗಳನ್ನು ಬಲ್ಲವರೆಲ್ಲ ವಿದ್ಯಾವಂತರಲ್ಲ; ವಿದ್ಯಾವಂತನಾದವನು ಅಕ್ಷರಗಳನ್ನು ಕಲಿತಿರಲೇಬೇಕೆಂಬುದಿಲ್ಲ. ಅಕ್ಷರಗಳ ಕಲಿಕೆ ವಿದ್ಯೆಯನ್ನು ತರಬಹುದು, ತರದಿರಬಹುದು.

-ಹಾ.ಮಾ.ನಾಯಕ

★ ಈಗಿನ ಕಾಲದಲ್ಲಿ ಜನತೆಯ ಕೈ ಸೇರುವ ರಾಷ್ಟ್ರದ ಸಂಪತ್ತೆಂದರೆ ರಾಷ್ಟ್ರೀಯ ಸಾಲವೇ.

-ಕಾರ್ಲ್‌ಮಾರ್ಕ್ಸ್

★ ಧರ್ಮ ನಮಗೆ ಕೊಡುವ ಪ್ರಮುಖ ಬಳುವಳಿ ಪಾಪಪ್ರಜ್ಞೆ.

-ಚಾರ್ಲ್ಸ್ ಬೋದಿಲೇರ್

★ ಉಳ್ಳವರಿಗೆ ಹಬ್ಬವಾಯ್ತು, ಕವಿ ಕುಲಕ್ಕೆ ಕಬ್ಬವಾಯ್ತು, ಇಲ್ಲದವರಿಗೇನಾಯಿತು... ಹೇಳಿ ಯುಗಾದಿ?

-ಡಾ.ಸಿದ್ದಲಿಂಗಯ್ಯ